







ಮೀನುಪ್ರಿಯ ಪಕ್ಷಿಗಳಿಗಂತೂ ದಿನವೂ ವಿವಾಹ ಭೋಜನ. ಯಾರಿಗುಂಟು ಯಾರಿಗಿಲ್ಲ ಎಂಬಂತೆ ಬೆಳ್ಳಂಬೆಳಿಗ್ಗೆ ಇಲ್ಲಿನ ತೀರಕ್ಕೆ ಇವುಗಳು ದಾಂಗುಡಿಯಿಡುವ ಕಾರಣಕ್ಕೆ ಸ್ಥಳೀಯರಲ್ಲಿ ಹೆಚ್ಚಿನವರು ಈ ಪ್ರದೇಶವನ್ನು ನೋಡಿರದಿದ್ದರೂ ಪಕ್ಷಿ ಛಾಯಾಗ್ರಾಹಕರಲ್ಲಿ ಅನೇಕರಿಗಿದು ಮೆಚ್ಚಿನ ಪ್ರದೇಶ. ಸ್ಥಳೀಯ ಬೆಸ್ತ ನಾರಾಯಣ ಹೇಳುವಂತೆ ಮೊದಮೊದಲು ಒಬ್ಬಿಬ್ಬರು ಇಲ್ಲಿ ಹಕ್ಕಿ ಹುಡುಕುತ್ತಾ ಕ್ಯಾಮೆರಾ ಹೊತ್ತುಕೊಂಡು ಬರುತ್ತಿದ್ದರು. ಒಮ್ಮೆ ಬಂದವರು ಮತ್ತೊಮ್ಮೆ ಇನ್ನಷ್ಟು ಜನರನ್ನು ಕರೆದುಕೊಂಡು ಬಂದರು. ಹೀಗೆ ಅವರವರಲ್ಲೇ ಬಾಯಿ ಮಾತಿನ ಪ್ರಚಾರ ದೊರೆತು ಇದೀಗ ಹೀಗೆ ಬರುವವರ ಸಂಖ್ಯೆ ಹೆಚ್ಚಿದೆ.

‘ಮಂಗಳೂರು, ಮೈಸೂರು, ಬೆಂಗಳೂರಿಗರೇ ಇಲ್ಲಿಗೆ ಬರುವುದು ಹೆಚ್ಚು. ಮೊದಲು ಬಂದವರು ದೋಣಿಯಲ್ಲಿ ಕರೆದೊಯ್ಯಲು ಕೇಳಿದಾಗ ಮುಲಾಜಿಗೆ ಒಪ್ಪಿಕೊಂಡೆ. ಇದೀಗ ಅವರಲ್ಲಿ ನನ್ನ ಮೊಬೈಲ್ ನಂಬರ್ ಇದೆ. ಮೊದಲೇ ಮಾತಾಡಿಕೊಂಡು ದೋಣಿಯನ್ನು ಬುಕ್ ಮಾಡುತ್ತಾರೆ. ಅವರ ಒಡನಾಟದಿಂದ ಈ ಪಕ್ಷಿಗಳ ಇಂಗ್ಲಿಷ್ ಹೆಸರು ನನಗೂ ಗೊತ್ತಾಗಿದೆ’ ಎಂದು ನಕ್ಕರು ನಾರಾಯಣ.

ನಾವು ಮೊದಲೇ ಮಾತನಾಡಿಕೊಂಡು ಹೋಗಿದ್ದುದರಿಂದ ನಾರಾಯಣರ ದೋಣಿ ನಮಗಾಗಿ ಕಾಯುತ್ತಿತ್ತು. ಅತ್ತ ಮೂಡಣದಲ್ಲಿ ಬೆಳಕಾಗುತ್ತಿದ್ದಂತೆಯೇ ಇತ್ತ ನದಿ ತೀರದಲ್ಲಿ ಪಕ್ಷಿಗಳ ಚಟುವಟಿಕೆ ಆರಂಭವಾಯಿತು. ಹರಿಯುವ ನೀರಿನ ಕೆಳಮಟ್ಟದಲ್ಲಿ ಹಾರುತ್ತಾ ದರ್ಶಿನಿ ಹೋಟೆಲ್‌ನ ಬೆಳಗಿನ ಗ್ರಾಹಕರಂತೆ ಬಂದು ನೀರಲ್ಲೇ ತೇಲುತ್ತ, ಆಟವಾಡುತ್ತಿದ್ದ ಮೀನುಗಳನ್ನು ಅನಾಮತ್ತಾಗಿ ಎತ್ತಿ ದಡದಲ್ಲೋ ಅಥವಾ ಅಲ್ಲಿರುವ ಒಣಗಿದ ಮರದ ಬೊಡ್ಡೆಗಳ ಮೇಲೋ ಕುಳಿತು ಟಿಫಿನ್ ಮಾಡುವುದರಲ್ಲಿ ಥೇಗೆಗಳು ಮೊದಲಿಗರು. ನದಿರೀವಗಳು, ಮೀನು ಗಿಡುಗಗಳು ನಂತರ ಬಂದು ಸೇರಿಕೊಂಡವು. ಆಮೇಲೆ  ಗರುಡ– ಹೀಗೆ ಇವುಗಳ ಸಂಖ್ಯೆ ನಿಧಾನವಾಗಿ ಏರತೊಡಗಿತು.

ನದಿ ತೀರದಲ್ಲಿ ಎಲ್ಲಿಂದಲೋ ಬಂದು ಸೆಟ್ಲಾದ ಸಿಂಪಿಬಾಕಗಳು ತಮ್ಮ ದಿನಗೆಲಸವನ್ನು ಆರಂಭಿಸಿದ್ದವು. ಕೆಂಪು ಕಾಲು, ಉದ್ದ ಕೊಕ್ಕಿನ ಈ ಸಿಂಪಿಬಾಕಗಳಿಗಂತೂ ಆವತ್ತು ನಮ್ಮೆಲ್ಲರ ದೃಷ್ಟಿ ತಗುಲಿರಬಹುದು. ಹಾಗೆಯೇ ನಮ್ಮೆಲ್ಲರ ಕ್ಯಾಮೆರಾ ದೃಷ್ಟಿ ಕೂಡಾ. ಅಲ್ಲಿ ಅವುಗಳು ಬೇಟೆಯಾಡುತ್ತಾ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರೆ ಇತ್ತ ನಮ್ಮ ಕ್ಯಾಮೆರಾಗಳಿಗೆ ಅವುಗಳ ಪ್ರತಿಯೊಂದು ಚಲನವಲಗಳೂ ಮೃಷ್ಟಾನ್ನ ಭೋಜನವಾದದ್ದಂತೂ ಖರೇ.

ಊರಿಂದ ಸ್ವಲ್ಪ ದೂರವಿದ್ದು ಗೌಜು ಗಲಾಟೆಯಿರದ ಪ್ರಶಾಂತ ವಾತಾವರಣದಲ್ಲಿ ಈ ಮೀನುಬಾಕ ಹಕ್ಕಿಗಳಿಗೆ ಭರಪೂರ ವೈವಿಧ್ಯವಿರುವುದು ಆರಾಮವಾಗಿ ಇಲ್ಲಿ ವಿಹರಿಸಲು ಅನುಕೂಲವಾಗಿದೆ. ಅಲ್ಲಿ ಕಂಡು ಬಂದ ಪಕ್ಷಿಗಳ ಅನೇಕ ಜಾತಿಯವುಗಳನ್ನು ನಮ್ಮಲ್ಲಿ ಅನೇಕರು ಇದೇ ಮೊದಲ ಬಾರಿಗೆ ನೋಡಿದ್ದು.

ಪ್ರವಾಸೋದ್ಯಮದ ಹೆಸರಿನಲ್ಲಿ ಹೆಚ್ಚು ಪ್ರಚಾರಕ್ಕೆ ಒಳಗಾಗಿ ಪ್ರವಾಸಿಗರ ಕಿರುಕುಳದಿಂದ ಪಕ್ಷಿಸಂಕುಲಗಳು ತಮ್ಮ ನೆಲೆಯನ್ನು  ಕಳೆದುಕೊಂಡಿರುವ ಅನೇಕ ಉದಾಹರಣೆಗಳು ನಮ್ಮ ಕಣ್ಣೆದುರಲ್ಲೇ ಇವೆ. ಈ ಪ್ರದೇಶ ಹೆಚ್ಚು ಜನರಿಗೆ ಗೊತ್ತಿರದ ಕಾರಣಕ್ಕೇನೇ ಅಂತಹ ಎಲ್ಲ ಭಾನಗಡಿಗಳಿಂದ ದೂರವಾಗಿ ಉಳಿದಿದೆ.